**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**C.C. No.1684/2018**

**CW- 11** **PW:10**

| | |
|---|---|
| ಸಾಕ್ಷಿಯ ಹೆಸರು | ಃ ಚಂದ್ರಶೇಖರ ಮೇಲಿನಮನಿ |
| ತಂದೆ /ಗಂಡನ ಹೆಸರು | ಃ ಹನಮಂತಪ್ಪ |
| ವಯಸ್ಸು | ಃ 66 ವರ್ಷ |
| ಉದ್ಯೋಗ | ಃ ನಿವೃತ್ತ ಪಿ ಎಸ್ ಐ |
| ವಾಸಸ್ಥಳ | ಃ ಲಕ್ಷ್ಮಿ ಕಾಲನಿ, ಹುಬ್ಬಳ್ಳಿ |

ದಿಃ **11.06.2026.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ಸನ್ 2017 ರಲ್ಲಿ ನಾನು ಎಪಿಎಂಸಿ ನವನಗರ ಪೊಲಿಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕಾರ್ಯನಿರ್ವಹಿಸಿದ್ದೇನೆ.

ದಿಃ 06.11.2017 ರಂದು ಚಾಸಾಃ 1 ರವರು ಸಾಯಂಕಾಲ 5 ಗಂಟೆಗೆ ನಮ್ಮ ಠಾಣೆಗೆ ಬಂದು ಲಿಖಿತ ದೂರನ್ನು ಕೊಟ್ಟರು. ಅದನ್ನು ಸ್ವೀಕರಿಸಿ ಠಾಣಾ ಗುನ್ನಾ ಸಂಖ್ಯೆ 165/2017 ಅಂತಾ ದಾಖಲಿಸಿದೆ. ಪ್ರಥಮ ವರ್ತಮಾನ ವರದಿ ತಯಾರಿಸಿ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ಕಳುಹಿಸಿದೆ. ನಾನು ಆ ದಿವಸ ಸ್ವೀಕರಿಸಿದ ದೂರಿನ ಪ್ರತಿಯನ್ನು ನೋಡಿ ಗುರುತಿಸುತ್ತಿದ್ದು ಅದು ಈಗಾಗಲೇ ನಿಪಿ.1 ಅಂತಾ ಗುರುತಿಸಲಾಗಿದ್ದು ನನ್ನ ಸಹಿಯನ್ನು ನಿಪಿ.1(ಸಿ) ಎಂದು ಗುರುತಿಸಲಾಯಿತು. ನಾನು ದಾಖಲಿಸಿದ ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸುತ್ತಿದ್ದು ಅದನ್ನು ನಿಪಿ.5 ಎಂದು, ನನ್ನ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು. ದಿಃ 07.11.2017 ರಂದು ಬೆಳಿಗ್ಗೆ 8.45 ಕ್ಕೆ ಇಬ್ಬರು ಪಂಚರಾದ ಚಾಸಾಃ 2 ಮತ್ತು 3 ರವರನ್ನು ಹಾಜರುಪಡಿಸಿಕೊಂಡು ಫಿರ್ಯಾದಿ ತೋರಿಸಿದ ಘಟನಾ ಸ್ಥಳದಲ್ಲಿ ಸ್ಥಳ ಪಂಚನಾಮೆ ಮಾಡಿದೆ. ಆ ದಿವಸ ನಾನು ತಯಾರಿಸಿದ ಘಟನಾ ಸ್ಥಳದ ಪಂಚನಾಮೆ ಈಗಾಗಲೇ ನಿಪಿ.2 ಅಂತಾ ಗುರುತಿಸಲಾಗಿದ್ದು ನನ್ನ ಸಹಿಯನ್ನು ನಿಪಿ.2(ಸಿ) ಎಂದು

ಗುರುತಿಸಲಾಯಿತು. ಆ ಪಂಚನಾಮೆಯಲ್ಲ್ಲೆ ಫಿರ್ಯಾದಿ ಹಾಜರುಪಡಿಸಿದ 2 ಬಡಿಗೆಗಳನ್ನು ಜಪ್ತು ಮಾಡಿದೆ. ಅವು ಈಗ ನ್ಯಾಯಾಲಯದ ಮುಂದೆ ಇದ್ದು ಅವುಗಳನ್ನು ನಾನು ನೋಡಿ ಗುರುತಿಸುತ್ತಿದ್ದು ಅವು ಈಗಾಗಲೇ ಮು ಮಾ.1 ಮತ್ತು 2 ಎಂದು ಗುರುತಿಸಲಾಗಿದೆ. ಪಂಚನಾಮೆಯನ್ನು ಬೆಳಿಗ್ಗೆ 8.45 ರಿಂದ 10 ಗಂಟೆಯವರೆಗೆ ಮಾಡಿದ್ದೇನೆ. ಸಾಕ್ಷಿದಾರರಾದ ಚಾಸಾಃ 4,5,6,7,8,9 ಇವುಗಳ ಹೇಳಿಕೆಗಳನ್ನು ಪಡೆದಿದ್ದೇನೆ. ದಿಃ 07.11.2017 ರಂದು ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿದ್ದೇನೆ. ಗಾಯಾಳುಗಳ ಗಾಯದ ಪ್ರಮಾಣ ಪತ್ರ ಪಡೆಯುವ ಸಲುವಾಗಿ ಕಿಮ್ಸ ಆಸ್ಪತ್ರೆಯ ಅಧಿಕಾರಿಗಳಿಗೆ ಮನವಿ ಮಾಡಿದೆ. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾಃ 12 ರವರಿಗೆ ನೀಡಿದೆ.

**ಪಾಟಿಸವಾಲುಃ ಆರೋಪಿ ಪರ ಶ್ರೀ ಐ ಎಸ್ ಟಿ ವಕೀಲರಿಂದಃ**

ಘಟನಾ ಸ್ಥಳ ನಮ್ಮ ಠಾಣೆಯಿಂದ ಎರಡೂವರೆ ಕಿ ಮಿ ದೂರ ಇದೆ. ಪ್ರಥಮ ವರ್ತಮಾನ ವರದಿಯನ್ನು ನಾನೇ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿ. ಕಿಮ್ಸ ಆಸ್ಪತ್ರೆಯಲ್ಲಿ ಯಾರಾದರೂ ಹೊಡೆದಾಟದ ಹಿನ್ನೆಲೆಯಿಂದ ಆಸ್ಪತ್ರೆಗೆ ಚಿಕಿತ್ಸೆಗೆ ಬಂದರೆ ತತಕ್ಷಣವೇ ಪೊಲಿಸ್ ಠಾಣೆಗೆ ಮಾಹಿತಿ ಕೊಡುತ್ತಾರೆ ಎಂದರೆ ಸರಿ. ಈ ಘಟನಾವಳಿಗಳ ಬಗ್ಗೆ ನಮ್ಮ ಠಾಣೆಗೆ  ಯಾವದೇ ರೀತಿಯಲ್ಲಿ ಆಸ್ಪತ್ರೆಯಿಂದ ಮಾಹಿತಿ ಬಂದಿಲ್ಲ ಅವರೇ ಲಿಖಿತವಾಗಿ ದೂರ ಕೊಟ್ಟಿದ್ದರಿಂದ ಘಟನೆಯ ಬಗ್ಗೆ ಮಾಹಿತಿ ಇದೆ. ಈ ಘಟನೆಯ ಬಗ್ಗೆ  ಫಿರ್ಯಾದಿ ಬಂದು ನಮ್ಮ ಠಾಣೆಗೆ ಬಂದು ತಿಳಿಸುವವರೆಗೂ ನಮಗೆ ಮಾಹಿತಿ ಇರಲಿಲ್ಲ ಎಂದರೆ ಸರಿ. ದಿಃ 30.10.2017 ರಂದು 1 ನೇ ಆರೋಪಿಯು ನಮ್ಮ ಠಾಣೆಗೆ ಬಂದು ಈ ಪ್ರಕರಣದಲ್ಲಿನ ಚಾಸಾಃ 4 ಮತ್ತು 5, 7,8,9 ಸೇರಿ ಹಲ್ಲೆ ಮಾಡಿದ ಹಿನ್ನೆಲೆಯಲ್ಲಿ ದೂರು ಕೊಟ್ಟಿರುವ ವಿಚಾರ ನನಗೆ ಗೊತ್ತಿಲ್ಲ. ಆ ಪ್ರಕರಣದಲ್ಲಿ ಆರೋಪಿ ನಂ.1, 15 ರಿಂದ 20 ದಿವಸ ಒಳರೊಗಿಯಾಗಿ ಚಿಕಿತ್ಸೆ ಪಡೆದಿದ್ದು ಅದರ ಬಗ್ಗೆ ಎಮ್ ಎಲ್ ಸಿ ಆಗಿದೆ ಎನ್ನುವ ವಿಚಾರ ಗೊತ್ತಿಲ್ಲ. ಘಟನೆಯ ಬಗ್ಗೆ ಮಾಹಿತಿ ಕೊಡುವುದು ತಡ ಆದಾಗ ಕೂಲಂಕುಷವಾಗಿ ಸ್ಥಾನಿಕವಾಗಿ ಪರಿಶೀಲನೆ ಮಾಡಬೇಕು ಎಂದರೆ ಸರಿ. ನಾನು ಸ್ಥಾನಿಕವಾಗಿ ಯಾವದೇ ವಿಚಾರ ಮಾಡದೇ ದೂರುದಾರನಿಂದ ಸುಳ್ಳು ದೂರನ್ನು ಆರೋಪಿತರ ವಿರುದ್ದ ಸ್ವೀಕರಿಸಿದ್ದೇನೆ ಎಂದರೆ ಸರಿಯಲ್ಲ.  ಚಾಸಾಃ 4 ಮತ್ತು

5 ರವರು ಈ ಘಟನೆಗೆ ಸಂಬಂದಪಟ್ಟಂತೆ ಚಾಸಾಃ 1 ರವರು ಫಿರ್ಯಾದಿ ನೀಡುವುದಕಿಂತ ಮೊದಲು ನಮ್ಮ ಠಾಣೆಗೆ ಬಂದಿಲ್ಲ ಎಂದರೆ ಸರಿ. ದಿಃ 30.10.2017 ರಿಂದ ದಿಃ 06.11.2017 ರ ಅವಧಿಯ ಒಳಗಡೆ ನಾನು ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ. ಚಾಸಾಃ 1 ರವರು ಘಟನೆ ಆದಾಗ ಸ್ಥಳದಲ್ಲಿ ಇರಲಿಲ್ಲ ಹಾಗೂ ಅವರ ಗೋವಾದಲಿಲ ಇದ್ದು, ಈ ಪ್ರಕರಣದ 1 ನೇ ಆರೋಪಿಯ ಮೇಲೆ ಹಲ್ಲೆ ಆಗಿದ್ದು ಆತ ನೀಡಿದ ದೂರಿಗೆ ಪ್ರತಿ ದೂರು ಅಂತಾ ಚಾಸಾಃ 1 ರವರು ತನ್ನ ಮಕ್ಕಳಾದ ಚಾಸಾಃ 4 ಮತ್ತು 5 ರವರು ಸಿಸಿ ನಂ.1685/2018 ರಲ್ಲಿ ಆರೋಪಿತರಾಗಿದ್ದು ಅವರನ್ನು ರಕ್ಷಿಸುವ ಸಲುವಾಗಿ ಈ ದೂರು ದಾಖಲಿಸಿದ್ದಾರೆ ಎಂದರೆ ಸಾಕ್ಷಿ ಆ ಬಗ್ಗೆ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಸ್ಥಳಕ್ಕೆ ಹೋದಾಗ ಯಾವದೇ ರಸ್ತೆ ಕಾಮಗಾರಿ ನಡೆಯುತ್ತಿರಲಿಲ್ಲ. ದೂರನ್ನು ಓದಿದ್ದೇನೆ. ಫಿರ್ಯಾದಿಯಲ್ಲಿ ಹೇಳಿದ ವಿಷಯಗಳನ್ನು ಸಮಗ್ರವಾಗಿ ನಾನು ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳಕ್ಕೆ ಹೋಗಿಲ್ಲ ಮತ್ತು ಸ್ಥಾನಿಕರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ದಿಃ 07.11.2017 ರಂದು ನಾನು ಬೆಳಿಗ್ಗೆ ಘಟನಾ ಸ್ಥಳಕ್ಕೆ ಹೋಗಿ 8.45 ರಿಂದ 10 ಗಂಟೆಗೆ ಹೋಗಿ ಸ್ಥಳ ಪಂಚನಾಮೆ ಮಾಡಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿವಸ ಮು ಮಾ 1 ಮತ್ತು 2 ನ್ನು ಚಾಸಾಃ 1 ರವರ ಎಲ್ಲಿಂದಲೊ ತಂದು ಕೊಟ್ಟರು. ಘಟನಾ ಸ್ಥಳದಲ್ಲಿ ನಾನು ಹೊದಾಗ ಮು ಮಾ 1 ಮತ್ತು 2 ಕಟ್ಟಿಗೆಗಳು ಇರಲಿಲ್ಲ ಎಂದರೆ ಸರಿ. ನಾನು ಘಟನಾ ಸ್ಥಳಕ್ಕೆ ಹೋದಾಗ ಚಾಸಾಃ 4 ರಿಂದ 9 ರವರ ಹೇಳಿಕೆಗಳನ್ನು ಪಡೆದಿಲ್ಲ, ಸ್ಥಳ ಪಂಚನಾಮೆ ಮಾಡಿಲ್ಲ, ಮು ಮಾ1 ಮತ್ತು 2 ನ್ನು ಘಟನಾ ಸ್ಥಳದಲ್ಲಿ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮು ಮಾ 1 ಮತ್ತು 2 ತರಹದ ಕಟ್ಟಿಗೆಗಳು ಸಾಮಾನ್ಯವಾಗಿ ಎಲ್ಲರ ಮನೆಯಲ್ಲಿ ಸಿಗುತ್ತವೆ ಎಂದರೆ ಸರಿ. ಗಾಯದ ಪ್ರಮಾಣಪತ್ರ ಪಡೆಯಲು ಮನವಿ ಪತ್ರ ಸಲ್ಲಿಸಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಅನುಕೂಲವಾಗಲಿ ಎಂದು ನಾನು ಮತ್ತು ಫಿರ್ಯಾದಿ ವೈದ್ಯರಿಂದ ಸುಳ್ಳು ಗಾಯದ ಪ್ರಮಾಣಪತ್ರಗಳನ್ನು ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ.

2. ಆರೋಪಿ ನಂ.4 ಎಚ್ ಡಿ ಎಮ್ ಸಿ ಯಲ್ಲಿ ವಾಟರಮೆನ್ ಆಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಗೊತ್ತಿಲ್ಲ. ಆರೋಪಿ 4 ಆ ದಿವಸ ಕೆಲಸದ ಮೇಲೆ ಇದ್ದು

ಘಟನಾ ಸ್ಥಳದಲ್ಲಿ ಇರಲಿಲ್ಲ ಮತ್ತು ಆ ಬಗ್ಗೆ ತನಿಖೆ ಮಾಡಿಯೆ ಇಲ್ಲ ಎಂದರೆ ಸಾಕ್ಷಿ ಆತನ ಬಗ್ಗೆ ವಿಚಾರ ಮಾಡಿಲ್ಲ ಎಂದು ನುಡಿಯುತ್ತಾರೆ. ಆರೋಪಿ ನಂ.4 ಈತ ನೌಕರನಾಗಿದ್ದು ಆತನನ್ನು ಈ ಪ್ರಕರಣದಲ್ಲಿ ಸೇರಿಸಿದರೆ 1 ನೇ ಆರೋಪಿ ದಾಖಲಿಸಿದ ಪ್ರಕರಣದಲ್ಲಿ ರಾಜಿ ಆಗಬಹುದು ಅಂತಾ ಚಾಸಾಃ 1 ರವರು ಆರೋಪಿ ನಂ.4 ರವರ ದೂರು ನೀಡಿದ್ದು, ಚಾಸಾಃ 1 ರವರ ಜೊತೆ ಮಿಲಾಪೆಯಾಗಿ ಆರೋಪಿ ನಂ.4 ರವರನ್ನು ಈ ಪ್ರಕರಣದಲ್ಲಿ ಸೇರಿಸಲಾಗಿದೆ ಎಂದರೆ ಸಾಕ್ಷಿ ಆ ಬಗ್ಗೆ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿತರಿಗೂ ಮತ್ತು ಈ ಘಟನೆಗೂ ಏನು ಸಂಬಂದ ಇರದಿದ್ದರೂ ಸಹ ಆರೋಪಿತರ ಮೇಲೆ ಸುಳ್ಳು ಪ್ರಥಮ ವರ್ತಮಾನ ವರದಿ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**(ಶ್ರೀ ರಮೇಶ ಎಸ್ ಗಾಣಿಗೇರ)**

**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.

**3** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**C.C. No.1684/2018**

**CW- 10** **PW:9**

| | |
|---|---|
| ಸಾಕ್ಷಿಯ ಹೆಸರು | ಃ ಡಾ. ಅಶೋಕ ಲೋಣಿ |
| ತಂದೆ /ಗಂಡನ ಹೆಸರು | ಃ ಮುನಿಯಪ್ಪ |
| ವಯಸ್ಸು | ಃ 63 ವರ್ಷ |
| ಉದ್ಯೋಗ | ಃ ನಿವೃತ್ತ ವೈದ್ಯರು |
| ವಾಸಸ್ಥಳ | ಃ ಹುಬ್ಬಳ್ಳಿ |

ದಿಃ **11.06.2026.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ದಿಃ 19.09.2006 ರಿಂದ ದಿಃ 28.02.2023 ರವರೆಗೆ ಕಿಮ್ಸ ಆಸ್ಪತ್ರೆ ಹುಬ್ಬಳ್ಳಿಯಲ್ಲಿ ಹಿರಿಯ ವೈದ್ಯರಾಗಿ ಕಾರ್ಯನಿರ್ವಹಿಸಿದ್ದೇನೆ.

ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ದಿಃ 30.10.2017 ರಂದು ನಾನು ತುರ್ತು ಚಿಕಿತ್ಸಾ ವಿಬಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಹೇಮಂತ ರಾಮಪ್ಪ ಹಿರೆಮನಿ ಚಾಸಾಃ 4 ಇವರು ಹೊಡೆದಾಟದಲ್ಲಿ ಗಾಯಗೊಂಡು ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದಿದ್ದರು. ಅವರು ಸಾಯಂಕಾಲ 5 ಗಂಟೆಗೆ ಬಂದಿದ್ದರು. ಅವರನ್ನು ಪರೀಕ್ಷಿಸಲಾಗಿ ಈ ಕೆಳಕಂಡಂತೆ ಗಾಯಗಳು ಆಗಿರುವುದು ಕಂಡುಬಂದಿತು.

1) Injury to head, neck and chest

2) Abrecion over the neck on left side

3) Injury to groin on left side

ಇವರನ್ನು ನಂತರ ಕ್ಷಕಿರಣ ಮತ್ತು ಸಿಟಿ ಬ್ರೇನ್ ಪರೀಕ್ಷೆಗೆ ಒಳಪಡಿಸಲಾಗಿ ಅದರಲ್ಲಿ ಯಾವದೇ ತೆರನಾದ ನ್ಯೂನ್ಯತೆಗಳು ಇರುವುದು ಕಂಡುಬರಲಿಲ್ಲ. ಆದ್ದರಿಂದ ನಾನು ಗಾಯದ ಪ್ರಮಾಣದಲ್ಲಿ ನಮೂದಿಸಿದ ಗಾಯಗಳು ಸಾದಾರಣ ಸ್ವರೂಪದ್ದು ಎಂದು ಅಬಿಪ್ರಾಯಪಡುತ್ತೇನೆ. ಈ ಗಾಯಗಳು 24 ಗಂಟೆಯ ಒಳಗಡೆ ಆಗಿದೆ ಅಂತಾ ಅಬಿಪ್ರಾಯಪಡುತ್ತೇನೆ.

2. ಅದೇ ದಿನ 30.10.2017 ರಂದು ಸಾಯಂಕಾಲ 5.05 ಗಂಟೆಗೆ ಚಾಸಾಃ 5 ಇವರೂ ಕೂಡ ಹೊಡೆದಾಟದಲ್ಲಿ ಗಾಯಗೊಂಡು ಚಿಕಿತ್ಸೆಗಾಗಿ ಬಂದಿದ್ದರು. ಇವರನ್ನು ಪರೀಕ್ಷಿಸಲಾಗಿ ಈ ಕೆಳಕಂಡ ಗಾಯಗಳು ಕಂಡುಬಂದವು.

1) Injury to left sholder and left leg

2) Pain in the chest

ಇವರನ್ನು ಕೂಡ ಕ್ಷಕಿರಣ ಮತ್ತು ಸಿಟಿ ಬ್ರೇನ್ ತಪಾಸಣೆಗೆ ಒಳಪಡಿಸಿ ಯಾವದೇ ನ್ಯೂನ್ಯತೆಗಳು ಕಂಡು ಬರಲಿಲ್ಲ. ಆದ್ದರಿಂದ ನಾನು ನಮೂದಿಸಿದ ಗಾಯದ ಪ್ರಮಾಣ ಪತ್ರದಲ್ಲಿ ಇರುವ ಗಾಯಗಳು ಸಾದಾರಣ ಸ್ವರೂಪದ್ದು ಎಂದು ಅಬಿಪ್ರಾಯಪಡುತ್ತೇನೆ. ಈ ಗಾಯಗಳು ಕಳೆದ 24 ಗಂಟೆಯಲ್ಲಿ ಆಗಿದೆ ಎಂದು ಅಬಿಪ್ರಾಯಪಡುತ್ತೇನೆ. ನನಗೆ ತೊರಿದಂತೆ ನಾನು 2 ಗಾಯದ ಪ್ರಮಾಣ ಪತ್ರಗಳನ್ನು ನೀಡಿದ್ದು ಅವನ್ನು ನಿಪಿ.3 ಮತ್ತು 4 ಎಂದು, ನನ್ನ ಸಹಿಗಳನ್ನು ನಿಪಿ.3(ಎ) ಮತ್ತು ನಿಪಿ.4(ಎ) ಎಂದು ಗುರುತಿಸಲಾಯಿತು. ಈ ಗಾಯಗಳು ಗಟ್ಟಿ ಮತ್ತು ಮೊಂಡವಾದ ವಸ್ತುವಿನಿಂದ ಹೊಡೆದಾಗ ಆಗಬಹುದು ಅಂತಾ ಅಬಿಪ್ರಾಯಪಡುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಐ ಎಸ್ ಟಿ ವಕೀಲರಿಂದಃ**

ಆ ದಿವಸ ಬೆಳಿಗ್ಗೆ 12 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ಆಸ್ಪತ್ರೆಯಲ್ಲಿ ಇದ್ದೆ. ಆ ದಿವಸ ನಾನು ಕರ್ತವ್ಯದಲ್ಲಿದ್ದೆ ಅಂತಾ ತೊರಿಸಲು ತನಿಖಾಧಿಕಾರಿಗಳು ನನ್ನ ಹಾಜರಾತಿಯ ಪುಸ್ತಕವನ್ನು ನನ್ನಿಂದಾಗಲಿ ಹಾಗೂ ನನ್ನ ಮೇಲಾಧಿಕಾರಿಗಳಿಂದಾಗಲಿ ಪಡೆದಿಲ್ಲ. ಚಾಸಾಃ 4 ಮತ್ತು 5 ರವರಿಗೆ ಎಷ್ಟೊತ್ತಿನಿಂದ ಎಷ್ಟೊತ್ತಿನವರೆಗೆ ಚಿಕಿಸ್ತೆ ಕೊಟ್ಟಿದ್ದೇವೆ ಅಂತಾ ನಿಪಿ.3 ಮತ್ತು 4 ರಲ್ಲಿ ತೊರಿಸಿಲ್ಲ ಎಂದರೆ ಸರಿ. ಎಷ್ಟೊತ್ತಿನಿಂದ ಎಷ್ಟೊತ್ತಿನವರೆಗೂ ಚಾಸಾಃ 4 ರವರಿಗೆ ಚಿಕಿತ್ಸೆ ಕೊಟ್ಟೆ ಅಂತಾ ಹೇಳಲು ಆಗುವುದಿಲ್ಲ. ಚಾಸಾಃ 4 ಹೇಮಂತ ಇವರು ಆ ದಿವಸ ಆಸ್ಪತ್ರೆಯಲ್ಲಿ ಒಂದರಿಂದ ಒಂದೂವರೆ ಗಂಟೆ ಇದ್ದರು. ಚಾಸಾಃ 4 ರವರನ್ನು ನಾನು ಪರೀಕ್ಷೆ ಮಾಡಲು 10 ನಿಮಿಷ ಸಾಕು. 10 ನಿಮಿಷದಲ್ಲಿ ಒಬ್ಬ ರೋಗಿಗೆ ಆಗಿರತಕ್ಕ ಗಾಯಗಳನ್ನು ಹಾಗೂ ದೇಹದ ತೊಂದರೆಗಳನ್ನು ಗುರುತಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾಃ 4 ರವರನ್ನು ಪರೀಕ್ಷೆ ಮಾಡಿದೆ ಎಂದು ಸುಳ್ಳು ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ಚಾಸಾಃ 4 ರವರನ್ನು ನಾನು ಪರೀಕ್ಷೆ ಮಾಡಿಲ್ಲ, ಆತನಿಗೆ ನಿಪಿ.3 ರಲ್ಲಿ ಹೇಳಿದಂತೆ ಯಾವದೇ ಗಾಯಗಳಾಗಿಲ್ಲ, ನಾನು ಸುಳ್ಳು ಪ್ರಮಾಣ ಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ. ನಿಪಿ.3 ಗಾಯದ ಪ್ರಮಾಣಪತ್ರದಲ್ಲಿ ಹೇಳಿರುವ 3 ಗಾಯಗಳಿಗೆ ಚಿಕಿಸ್ತೆ ಕೊಡಲು ಸುಮಾರು 1 ರಿಂದ 1.30 ಗಂಟೆ ಸಮಯ ಬೇಕಾಗುತ್ತದೆ ಎಂದರೆ ಸರಿಯಲ್ಲ. ಈ ಗಾಯಗಳು 24 ಗಂಟೆಯ ಒಳಗಡೆ ಆಗಿವೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾಃ 4 ನಮ್ಮ ಆಸ್ಪತ್ರೆಗೆ ಬಂದು ನಾನು ಚಿಕಿತ್ಸೆಯೂ ಕೊಟ್ಟಿಲ್ಲ ಹಾಗೂ ಬೂದ್ಯಾಪೂರ್ವಕವಾಗಿ ನಿಪಿ.3 ರಲ್ಲಿ ಚಿಕಿತ್ಸೆಯ ಸಮಯವನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ನಿಪಿ.3 ರಲ್ಲಿ ಹೇಳಿದ ಗಾಯಗಳು ಒಬ್ಬ ವ್ಯಕ್ತಿ ಬೈಕನಿಂದ ಕೆಳಗೆ ಬಿದ್ದಾಗ ಆಗುತ್ತವೆ ಎಂದರೆ ಸರಿಯಲ್ಲ. ಒಬ್ಬ ವ್ಯಕ್ತಿ ಸಾಮಾನ್ಯವಾಗಿ ಪುಟ್ ಪಾತ್ ಮೇಲೆ ನಡೆದುಕೊಂಡು ಹೊಗುವಾಗ ಆಕಸ್ಮಾತ್ತಾಗಿ ಬಿದ್ದರೆ ನಿಪಿ.3 ರಲ್ಲಿ ತೋರಿದ ಗಾಯಗಳು ಆಗುತ್ತವೆ ಎಂದರೆ ಸಾಕ್ಷಿ ಇವುಗಳು ಆಗುತ್ತವೆ ಮತ್ತೆ ಬೇರೆ ಗಾಯಗಳು ಆಗುವ ಸಾಧ್ಯತೆ ಇದೆ ಎಂದು ನುಡಿಯುತ್ತಾರೆ.

2. ಚಾಸಾಃ 5 ರವರಿಗೆ ಚಿಕಿತ್ಸೆ ಕೊಟ್ಟಾಗ ಸಾಯಕಾಲ 5.05 ಆಗಿತ್ತು. ನಿಪಿ.4 ರಲ್ಲಿಯೂ ಸಹ 5.05 ದಿಂದ ಎಲ್ಲಿಯವರಗೊ ಚಿಕಿತ್ಸೆ ಕೊಟ್ಟೆ ಅಂತಾ ನಮೂದಿಸಿಲ್ಲ ಎಂದರೆ ಸರಿ. ಚಾಸಾಃ 5 ರವರನ್ನು ನಾನು ಪರೀಕ್ಷೆ ಮಾಡಿಲ್ಲ, ಆತನಿಗೆ ನಿಪಿ.4 ರಲ್ಲಿ ಹೇಳಿದಂತೆ ಯಾವದೇ ಗಾಯಗಳಾಗಿಲ್ಲ, ನಾನು ಸುಳ್ಳು ಪ್ರಮಾಣ ಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ. ನಿಪಿ.4 ಗಾಯದ ಪ್ರಮಾಣಪತ್ರದಲ್ಲಿ ಹೇಳಿರುವ 2 ಗಾಯಗಳಿಗೆ ಚಿಕಿತ್ಸೆ ಕೊಡಲು ಸುಮಾರು 1 ರಿಂದ 1.30 ಗಂಟೆ ಸಮಯ ಬೇಕಾಗುತ್ತದೆ ಎಂದರೆ ಸರಿಯಲ್ಲ. ಈ ಗಾಯಗಳು 24 ಗಂಟೆಯ ಒಳಗಡೆ ಆಗಿವೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾಃ 5 ರವರು ನಮ್ಮ ಆಸ್ಪತ್ರೆಗೆ ಬಂದು ನಾನು ಚಿಕಿತ್ಸೆಯೂ ಕೊಟ್ಟಿಲ್ಲ ಹಾಗೂ ಬೂದ್ಯಾಪೂರ್ವಕವಾಗಿ ನಿಪಿ.4 ರಲ್ಲಿ ಚಿಕಿತ್ಸೆಯ ಸಮಯವನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ನಿಪಿ.4 ರಲ್ಲಿ ಹೇಳಿದ ಗಾಯಗಳು ಒಬ್ಬ ವ್ಯಕ್ತಿ ಬೈಕನಿಂದ ಕೆಳಗೆ ಬಿದ್ದಾಗ ಆಗುತ್ತವೆ ಎಂದರೆ ಸರಿಯಲ್ಲ. ಒಬ್ಬ ವ್ಯಕ್ತಿ ಸಾಮಾನ್ಯವಾಗಿ ಪುಟ್ ಪಾತ್ ಮೇಲೆ ನಡೆದುಕೊಂಡು ಹೊಗುವಾಗ ಆಕಸ್ಮಾತ್ತಾಗಿ ಬಿದ್ದರೆ ನಿಪಿ.4 ರಲ್ಲಿ ತೋರಿದ ಗಾಯಗಳು ಆಗುತ್ತವೆ ಎಂದರೆ ಸಾಕ್ಷಿ ಇವುಗಳು ಆಗುತ್ತವೆ ಮತ್ತೆ ಬೇರೆ

ಗಾಯಗಳು ಆಗುವ ಸಾಧ್ಯತೆ ಇದೆ ಎಂದು ನುಡಿಯುತ್ತಾರೆ.

3. ಯಾವದೇ ವ್ಯಕ್ತಿ ಹೊಡೆದಾಟದ ಹಿನ್ನೆಲೆಯಲ್ಲಿ ನಮ್ಮ ಕಿಮ್ಸ ಆಸ್ಪತ್ರೆಗೆ ಚಿಕಿತ್ಸೆ ಪಡೆಯಲು ಬಂದಾಗ ಸಂಬಂದಪಟ್ಟ ಪೊಲಿಸ್ ಠಾಣೆಗೆ ಎಮ್ ಎಲ್ ಸಿ ನೀಡುತ್ತಾರೆ ಎಂದರೆ ಸರಿ. ನಿಪಿ.4 ಮತ್ತು 5 ರಲ್ಲಿ ಪೊಲಿಸರಿಗೆ ಮಾಹಿತಿ ಕೊಟ್ಟ ಬಗ್ಗೆ ಬರೆದಿಲ್ಲ ಎಂದರೆ ಸರಿ. ಚಾಸಾಃ 4 ಮತ್ತು 5 ರವರನ್ನು ನಾನು ಪರೀಕ್ಷೆಯೆ ಮಾಡಿಲ್ಲ ಆದ್ದರಿಂದ ಪೊಲಿಸರಿಗೆ ಮಾಹಿತಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಚಾಸಾಃ 4 ಮತ್ತು 5 ರವರಿಗೆ ನಿಪಿ.3 ಮತ್ತು 4 ರಲ್ಲಿ ತೊರಿಸಿದಂತೆ ಯಾವದೇ ಗಾಯಗಳು ಆಗಿಲ್ಲ, ಆ ಗಾಯದ ಪ್ರಮಾಣಪತ್ರದಲ್ಲಿ ತೋರಿಸಿದ ಸಮಯದಲ್ಲಿ ಅವರಿಬ್ಬರಿಗೂ ಚಿಕಿತ್ಸೆ ಕೊಟ್ಟಿಲ್ಲ. ಅವರಿಬ್ಬರು ನಮ್ಮ ಆಸ್ಪತ್ರೆಗೆ ಬಂದೆ ಇಲ್ಲ ಎಂದರೆ ಸರಿಯಲ್ಲ. ಚಾಸಾಃ 4 ಮತ್ತು 5 ರವರು ಹೊರರೋಗಿಯಾಗಿ ಚಿಕಿತ್ಸೆ ಪಡೆದಿದ್ದಾರೆ. ನಿಪಿ.3 ಮತ್ತು 4 ಗಳನ್ನು ಚಾಸಾಃ 4 ಮತ್ತು 5 ರವರಿಗೆ ಅನುಕೂಲವಾಗಲಿ ಎಂದು ಆ ದಿವಸ ನಾನು ಕರ್ತವ್ಯದ ಮೇಲೆ ಇರದೇ ಇದ್ದರೂ ಸಹ ಅವರಿಗೆ ಅನುಕೂಲವಾಗಲಿ ಎಂದು ಹಾಗೂ 24 ಗಂಟೆಯ ಒಳಗಡೆ ಗಾಯ ಆಗಿವೆ ಅಂತಾ ಸುಳ್ಳು ಗಾಯದ ಪ್ರಮಾಣಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)
ಓ ಹೇ ಕೆ ಸರಿ ಇದೆ.

**(ಶ್ರೀ ರಮೇಶ ಎಸ್ ಗಾಣಿಗೇರ)**
**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.